**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಚಿಂತಾಮಣಿ.**

**ಸಿ.ಸಿ.ನಂ.1620/2026**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಕೃಷ್ಣಾ ರೆಡ್ಡಿ** | | |
| **ಗಂಡಃತಂದೆಃಹೆಸರು** | **ಗೋಪಾಲಪ್ಪ** | **ಪಿಡಬ್ಲೂಃ** | **1** |
| **ವಯಸ್ಸು** | **46** | **ಸಿಡಬ್ಲೂಃ** | **1** |
| **ಉದ್ಯೋಗಃ** | **ವ್ಯವಸಾಯ** | | |
| **ವಾಸ ಸ್ಥಳಃ** | **ಮುನಗನಹಳ್ಳಿ ಗ್ರಾಮ.** | | |

**ದಿನಾಂಕ 03-09-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದಃ-**

ಚಾ.ಸಾ.2 ನನ್ನ ಅಣ್ಣ. ಚಾ.ಸಾ.3 ನನ್ನ ಮಾವ. ಚಾಸಾ 4 ನನ್ನ ದೊಡ್ಡಪ್ಪ. ಆರೋಪಿ ನನಗೆ ಗೊತ್ತು. ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ಮತ್ತು ಆರೋಪಿತನ ನಡುವೆ ಗಲಾಟೆ ನಡೆದಿಲ್ಲ. ನನ್ನ ಜಮೀನಿನಲ್ಲಿ ಅಕ್ರಮ ಪ್ರವೇಶ ಮಾಡಿಲ್ಲ. ಆರೋಪಿತನು ಕೋಲಿನಿಂದ, ಬ್ಲೇಡಿನಿಂದ ಮತ್ತು ಕೈಗಳಿಂದ , ಕಾಲುಗಳಿಂದ ಹೊಡೆದಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಫ್ರಾಣಬೆದರಿಕೆಯನ್ನು ಹಾಕಿಲ್ಲ. ನಾನು ಜಮೀನಿನಲ್ಲಿ ಕೆಲಸ ಮಾಡುವಾಗ ಆಯಾ ತಪ್ಪಿ ಬಿದ್ದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವಾಗ ಚಿಂತಾಮಣಿ ಪೋಲೀಸರು ಬಂದು ಕೆಲವು ದಾಖಲೆಗಳನ್ನು ಸಹಿಯನ್ನು ಪಡೆದಿರುತ್ತಾರೆ.

ಪೋಲಿಸರಿಗೆ ಯಾವುದೇ ದೂರನ್ನು ಕೊಟ್ಟಿಲ್ಲ. ಸಾಕ್ಷಿಗೆ ದೂರನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು, ದೂರನ್ನು ನಿ.ಪಿ.1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು.

ನಿ.ಪಿ.1 ರಲ್ಲಿರುವ ಸಂಗತಿಗಳ ಬಗ್ಗೆ ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಕೋಲು ಮತ್ತು ಬ್ಲೇಡನ್ನು ನೋಡಿದರೆ ಗುರುತಿಸಲಾಗುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃಃ ಮಾನ್ಯ ಸ ಸ ಅ ರವರಿಂದಃ–**

ದಿ. 07.03.2014 ರಂದು ಬೆಳಿಗ್ಗೆ 08.30 ಗಂಟೆ ಸಮಯದಲ್ಲಿ ಮುನಗನಹಳ್ಳಿ ಗ್ರಾಮದ ನನ್ನ ಜಮೀನಿನ ಸರ್ವೆ ನಂ. 106 ರಲ್ಲಿ ನಾನು ಮತ್ತು ಚಾಸಾ 2 ರವರು ಹಿಪ್ಪ ನೇರಳೆ ಸೊಪ್ಪನ್ನು ಕಟಾವು ಮಾಡುತ್ತಿದ್ದು , ಆರೋಪಿಗಳು ಜಮೀನಿನೊಳಗೆ ಅಕ್ರಮ ಪ್ರವೇಶ ಮಾಡಿದರು ಎಂದರೆ ಸರಿಯಲ್ಲ. ಆರೋಪಿತರು ಸದರಿ ಜಮೀನು ತಮ್ಮದು ಎಂದು ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿಯಲ್ಲ. 1 ನೇ ಆರೋಪಿ ಬ್ಲೇಡಿನಿಂದ ನನ್ನ ಬಲಗೈಗೆ ಹೊಡೆದು ಸಾಧಾರಣ ರಕ್ತ ಗಾಯ ಮಾಡಿ ಕಾಲಿನಿಂದ ಸೊಂಟಕ್ಕೆ, ಎದೆ ಭಾಗಕ್ಕೆ ಹೊಡೆದನು ಎಂದರೆ ಸರಿಯಲ್ಲ. ಜಗಳ ಬಿಡಿಸಲು ಅಡ್ಡ ಬಂದ ಚಾಸಾ 2 ರವರಿಗೆ ಕೈಗಳಿಂದ ಹೊಡೆದು ಕೋಲಿನಿಂದ ಎಡಗೈಗೆ ಮತ್ತು ಬಲಗಾಲಿಗೆ ಹೊಡೆದು ನೋವುಂಟು ಮಾಡಿದನು ಎಂದರೆ ಸರಿಯಲ್ಲ. ಜಗಳ ಬಿಡಿಸಲು ಅಡ್ಡ ಬಂದ ಚಾಸಾ 3 ರವರಿಗೆ 1 ನೇ ಆರೋಪಿ ಕೋಲಿನಿಂದ ಬಲಗಾಲಿಗೆ ಹೊಡೆದು ನೋವುಂಟು

ಸಿಡಬ್ಲೂಃ 1

ಮಾಡಿದನು ಎಂದರೆ ಸರಿಯಲ್ಲ. ಆಗ ಅಡ್ಡ ಹೋದ ಚಾಸಾ 4 ರವರಿಗೆ 2 ನೇ ಆರೋಪಿ ಕೈಗಳಿಂದ ಹೊಡೆದು ನೋವುಂಟು ಮಾಡಿ ಪ್ರಾಣ ಬೆದರಿಕೆ ಹಾಕಿದನು ಎಂದರೆ ಸರಿಯಲ್ಲ.

ಸದರಿ ವಿಚಾರವಾಗಿ ನಾನು ಪೋಲಿಸರಿಗೆ ದೂರನ್ನು ನೀಡಿರುತ್ತೇನೆಂದರೆ ಸರಿಯಲ್ಲ.

ನಿಪಿ 1 ರ ಸಂಗತಿಗಳು ಗೊತ್ತಿದ್ದರು ನಾನು ಜಮೀನಿನಲ್ಲಿ ಬಿದ್ದು ಚಿಕಿತ್ಸೆ ಪಡೆದಿದ್ದೆ ಎಂದು ಆರೋಪಿತರೊಂದಿಗೆ ರಾಜಿ ಮಾಡಿಕೊಂಡಿದ್ದಕೋಸ್ಕರ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀಸವಾಲುಃ ಶ್ರೀ.ಟಿ.ಎನ್. ಆರೋಪಿ ಪರ ವಕೀಲರಿಂದಃ– ಇಲ್ಲ.**

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.